**ಅಸಲು ದಾವ ಸಂಖ್ಯೆಃ 164/2019**
**ಪಿ.ಡಬ್ಲೂ -1**

**ದಿಃ 18-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು ಪ್ರತಿವಾದಿ ಪರ ಮಾನ್ಯ ಡಿಜಿಪಿ ರವರಿಂದಃ-**

1. ಸಂಘರ್ಷ ಶಿವರುದ್ರಯ್ಯ ಹಿರೇಮಠ ಎಂದರೆ ನನ್ನ ಮಗ. ಸಂಘರ್ಷ ಎಲ್ ಎಲ್ ಬಿ ಪದವಿ ವಿದ್ಯಾಭ್ಯಾಸ ಮಾಡುತ್ತಿದ್ದ. ಸಂಘರ್ಷ ಬೆಳಗಾವಿಯ ನಿವಾಸಿಯಾಗಿದ್ದ. ಸಂಘರ್ಷ ಈಗ ಎಲ್ಲಿ ಇರುತ್ತಾನೆ ಎಂದು ನನಗೆ ಗೊತ್ತಿಲ್ಲ. 2006 ನೇ ಇಸವಿಯಲ್ಲಿ ಸಂಘರ್ಷ ಎಲ್ಲಿ ಇರುತ್ತಾನೆ ಎಂದು ಗೊತ್ತಿಲ್ಲ. 2006 ನೇ ಇಸವಿಯಲ್ಲಿ ಸಂಘರ್ಷ ಬೆಳಗಾವಿಯಿಂದ ಹೋಗಿದ್ದ. ಸಂಘರ್ಷ ಮನೆಯಲ್ಲಿ ಯಾರಿಗೂ ಹೇಳದೇ ಮನೆಯಿಂದ ಹೊರಟುಹೋಗಿದ್ದ, ಆತನಿಗೆ ಏನು ತೊಂದರೆ ಇತ್ತು ಎಂದು ನನಗೆ ಗೊತ್ತಿಲ್ಲ. ಸಂಘರ್ಷನ ತಂದೆ ಮರಣ ಹೊಂದಿರುತ್ತಾರೆ. ನನಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣುಮಗಳು ಇರುತ್ತಾರೆ. ಹೊಸಪೇಟೆ ಪೊಲೀಸಠಾಣೆಯಲ್ಲಿ ದೂರು ನೀಡಲು ಕಾರಣವೆಂದರೆ ನಮ್ಮ ಮನೆ ಹೊಸಪೇಟೆಯಲ್ಲಿ ಇತ್ತು. ನಾವು ಬೆಳಗಾವಿಯಲ್ಲಿ ದೂರು ನೀಡಿದರೆ ನಿಜಾಂಶ ಹೊರಬರುತ್ತದೆ ಎಂಬ ಕಾರಣಕ್ಕೆ ನಾವು ಹೊಸಪೇಟೆಯಲ್ಲಿ ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರದ್ದು ಯಾವುದೇ ತಪ್ಪು ಇಲ್ಲದೇ ಇದ್ದರೂ ವಿನಾಕಾರಣ ಈ ದಾವೆ ಹೂಡಿ ಅವರಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**